**3ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು, ಬೆಳಗಾವಿ**
**ಇವರ ನ್ಯಾಯಾಲಯದಲ್ಲಿ, ಬೆಳಗಾವಿ.**

ಸ್ಪೆಷಲ್ ಕೇಸ ನಂಃ 61/2023
ಪಿಡಬ್ಲು :5 ಸಿಡಬ್ಲು :5

| | |
|---|---|
| ಸಾಕ್ಷಿಯ ಹೆಸರು | : ಶ್ರೀ ಬಾಬು ಕೊಕರೆ |
| ಗಂಡನ ಹೆಸರು | : ಶ್ರೀ ರುಂಗು ಕೊಕರೆ |
| ವಯಸ್ಸು | : 31 ವರ್ಷ |
| ಉದ್ಯೋಗ | : ಚಾಲಕ |
| ವಾಸ್ತವ್ಯ | : ಗವಳಿವಾಡ, ಕುಸುಮಳ್ಳಿ. |
| ದಿನಾಂಕ | : 18-06-2026 ರಂದು ಸಾಕ್ಷೀದಾರರನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು. |

**ಸಾಕ್ಷಿಗೆ ಮರಾಠಿ ಭಾಷೆ ಹೊರತುಪಡಿಸಿ ನ್ಯಾಯಾಲಯದ ಭಾಷೆಯಾದ ಕನ್ನಡ, ಆಂಗ್ಲ ಭಾಷೆ ತಿಳಿಯದೇ ಇರುವುದರಿಂದ ಮರಾಠಿ ಭಾಷೆಯನ್ನು ಚೆನ್ನಾಗಿ ಮಾತನಾಡಲು ಮತ್ತು ಬರೆಯಲು ಬಲ್ಲವರಾದಂತಹ ಶ್ರೀ.ಎಸ್. ವಿ .ಬಿ ವಕೀಲರು ಬೆಳಗಾವಿ ವಕೀಲರ ಸಂಘ ಇವರನ್ನು ಭಾಷಾಂತರಕಾರರಾಗಿ ನೇಮಕ ಮಾಡಲಾಯಿತು. ಸದರಿ ವಕೀಲರಿಗೂ ಸಹ ಪ್ರಮಾಣ ವಚನ ಬೋಧಿಸಲಾಯಿತು.**

**ಮುಖ್ಯ ವಿಚಾರಣೆ : ವಿಶೇಷ ಸರ್ಕಾರಿ ಅಭಿಯೋಜಕರಿಂದ**

ಚಾಸಾ-1 ಪ್ರಾಸಾ-1 ಮಂಗೇಶ ಪರಿಚಯ ಇರುತ್ತಾರೆ. ಚಾಸಾ-4 ಗೌರಿ ಇವರ ಪರಿಚಯ ಇರುತ್ತಾರೆ. 1 ಮತ್ತು 2 ನೇ ಆರೋಪಿ ನನಗೆ ಗೊತ್ತಿರುತ್ತಾರೆ. ಆರೋಪಿತರು ವಿಚಾರಣೆಗೆ ಗೈರುಹಾಜರಾಗಿದ್ದು, ಅವರ ಗುರುತಿಸುವಿಕೆಯನ್ನು ಅಲ್ಲಗಳೆಯುವುದಿಲ್ಲ ಎಂದು ಆರೋಪಿ ಪರ ವಕೀಲರು ಅರ್ಜಿ ಸಲ್ಲಸಿದ್ದು ಅರ್ಜಿಯನ್ನು ಪುರಸ್ಕರಿಸಲಾಗಿದೆ. ನನಗೆ ದಿನಾಂಕ ನೆನಪಿರುವುದಿಲ್ಲ, 3 ವರ್ಷಗಳ ಹಿಂದ ಕೆಲಸ ಮುಗಿಸಿಕೊಂಡು ಕುಸುಮಳ್ಳಿಗೆ ವಾಪಸ್ಸು ಬರುವಾಗ ಮಂಗೇಶ ಕಾಂಬಳೆ ಅವರ ಮನೆ ಹತ್ತಿರ ಬಂದಾಗ ಮಂಗೇಶ ಕಾಂಬಳೆ ಮತ್ತು ಆರೋಪಿತರ ಮಧ್ಯೆ ಜಗಳ ಆಗುತ್ತಿತ್ತು. ನಾನು ಜಗಳ

ಬಿಡಿಸಿದೆನು. ಆ ಸಮಯದಲ್ಲಿ ಮಂಗೇಶ ಕಾಂಬಳೆ ಅವರ ಸೊಸೆ ಸಹ ಇದ್ದರು. ಅವರ ಹೆಸರು ನನಗೆ ಗೊತ್ತಿರುವುದಿಲ್ಲ. ಅವರುಗಳನ್ನು ಬಿಟ್ಟು ಬೇರೆ ಯಾರು ಇರಲಿಲ್ಲ. ಮಂಗೇಶ ಕಾಂಬಳೆ ಮತ್ತು 1 ನೇ ಆರೋಪಿ ರಾಮು ಕೊಕರೆ ಇಬ್ಬರು ಗಟರನಲ್ಲಿ ಬಿದ್ದಿದ್ದರು. ಒಬ್ಬರನ್ನೊಬ್ಬರು ಹಿಡಿದುಕೊಂಡಿದ್ದರು. ಇಷ್ಟನ್ನು ಮಾತ್ರ ನಾನು ನೋಡಿದ್ದೇನೆ.

2. ಘಟನೆಯ ಬಗ್ಗೆ ಪೋಲಿಸರು ನನ್ನ ಹೇಳಿಕೆ ಪಡೆದುಕೊಂಡಿದ್ದಾರೆ.

**(ಈ ಹಂತದಲ್ಲಿ ಸರ್ಕಾರಿ ಅಭಿಯೋಜಕರು ಸಾಕ್ಷಿದಾರರನ್ನು ಭಾಗಶಃ ಪ್ರತಿಕೂಲ ಸಾಕ್ಷಿಯೆಂದು ಪರಿಗಣಿಸಿ ಪಾಟೀ ಸವಾಲು ಮಾಡಲು ಅನುಮತಿ ಕೋರಿದ್ದಾರೆ, ಸಾಕ್ಷಿಯ ಹೇಳಿಕೆಯನ್ನು ಪರಿಗಣಿಸಿ ಪಾಟೀ ಸವಾಲು ಮಾಡಲು ಅನುಮತಿ ನೀಡಲಾಯಿತು).**

**<u>ಪಾಟೀ ಸವಾಲು: ವಿಶೇಷ ಸರ್ಕಾರಿ ಅಭಿಯೋಜಕರಿಂದ</u>**

3. ದಿನಾಂಕ 29-11-2022 ರಂದು ನಾನು ಪೋಲಿಸರ ಮುಂದೆ ನೀಡಿದ ಹೇಳಿಕೆಯಲ್ಲಿ "ನಮ್ಮೂರ ಮಂಗೇಶ ಕಾಂಬಳೆ ಇವರ ಮನೆಯ ಹತ್ತಿರ ಬಂದಾಗ ನಮ್ಮ ಗವಳಿವಾಡದ ಕೊಂಡು ರಾಮು ಕೊಕರೆ ಹಾಗೂ ಅವರ ಮಗ ರಾಮು ಕೊಂಡು ಕೊಕರೆ ಕೂಡಿಕೊಂಡು ಇದ್ದರು" ಎಂದು ಹೇಳಿದ್ದಿರಿ ಎಂದು ಹೇಳಿದ್ದಕ್ಕೆ ಸಾಕ್ಷಿ ನನಗೆ ನೆನಪಿಲ್ಲ ಎಂದು ಹೇಳಿದ್ದಾರೆ. ರಾಮು ಕೊಕರೆ ಇವನು ಮುಂಗೇಶ ಇವನ ಕಾಂಬಳೆ " ಬಲಗೈ ತೊಳಿಗೆ ತನ್ನ ಹಲ್ಲಿನಿಂದ ಕಚ್ಚಿದನು" ಎಂದು ಹೇಳಿದ್ದೀರಿ ಎನ್ನವುದಕ್ಕೆ ಸಾಕ್ಷಿ ನಾನು ನೋಡಿಲ್ಲ ಎಂದು ಹೇಳಿದ್ದಾರೆ. ಸಾಕ್ಷಿ ಹೇಳಿಕೆ ಭಾಗವನ್ನು ನಿಪಿ-7 ಎಂದುಗುರುತಿಸಲಾಯಿತು.

4. ನಾನು ಜಗಳ ಬಿಡಿಸಿದ ನಂತರ "ರಾಮು ಕೊಕರೆ ಮತ್ತು ಕೊಂಡು ಕೊಕರೆ ಕೂಡಿಕೊಂಡು ಮುಂಗೇನಿಗೆ ನೀನು ನಮ್ಮ ತಂಟೆಗೆ ಬಂದರೆ ನಿನಗೆ ಜೀವ ಸಹಿತ

ಬಿಡುವುದಿಲ್ಲ ಅಂತಾ ಜೀವದ ಧಮಕಿ ಹಾಕಿ ಅಲ್ಲಿಂದ ಹೋದರು" ಎಂದು ಹೇಳಿಕೆ ನೀಡಿದ್ದಿರಿ ಎನ್ನುವುದಕ್ಕೆ ಸಾಕ್ಷಿ ನಾನು ಅದನ್ನು ನೋಡಿಲ್ಲ ಎಂದು ಹೇಳಿದ್ದರೆ. ಸಾಕ್ಷಿ ಹೇಳಿಕೆ ಭಾಗವನ್ನು ನಿಪಿ–7 [ಎ] ಎಂದು ಗುರುತಿಸಲಾಯಿತು. ನಾನು ಮತ್ತು ಆರೋಪಿತರು ಒಂದೇ ಜಾತಿಯವರು ಎನ್ನುವುದು ಸರಿ. ನಾನು ಮತ್ತು ಆರೋಪಿತರು ಒಂದೆ ಏರಿಯಾದಲ್ಲಿ ವಾಸ ಮಾಡುತ್ತೇವೆ ಎನ್ನುವುದು ಸರಿ. ಆ ಕಾರಣ 1 ನೇ ಆರೋಪಿಯು ಮಂಗೇಶ ಅವರ ಕೈಗೆ ಕಚ್ಚಿದ್ದನ್ನು ನಾನು ನೋಡಿದ್ದು ಇಬ್ಬರು ಆರೋಪಿತರು ಮಂಗೇಶ ಅವರಿಗೆ ಜೀವ ಬೆದರಿಕೆ ಹಾಕಿದ್ದನ್ನು ನಾನು ಕೇಳಿಸಿಕೊಂಡು ನಿಪಿ–7 ಮತ್ತು ನಿಪಿ–7(ಎ) ಪ್ರಕಾರ ಹೇಳಿಕೆ ನೀಡಿದ್ದರು ಆರೋಪಿಗೆ ಸಹಾಯ ಮಾಡಲು ಸುಳ್ಳು ಸಾಕ್ಷ್ಯ ಹೇಳುತ್ತಿದ್ದೇನೆ ಎನ್ನುವುದು ಸರಿಯಲ್ಲ.

**ಪಾಟೀ ಸವಾಲು: ಶ್ರೀ.ಸಿ.ಆರ್.ಎನ್ ವಕೀಲರಿಂದ ಆರೋಪಿತರ ಪರವಾಗಿ**

5. ನಾನು ವಾಹನ ಚಲಾಯಿಸಲು ಪರವಾಣಿಗೆಯನ್ನು ಹೊಂದಿರುವುದಿಲ್ಲ ಆದರೆ ಚಾಲಕನಾಗಿ ಕೆಲಸ ಮಾಡುತ್ತಿದ್ದೇನೆ. ಟ್ರ್ಯಾಕ್ಟರ ದೊಡ್ಡ ವಾಹನ ಆಗಿದ್ದು ಅದನ್ನು ಪರವಾಣಿಗೆ ಇರವವರು ಮಾತ್ರ ಚಲಾಯಿಸಬೇಕು ಎನ್ನುವುದು ಸರಿ. ನಾನು 3 ವರ್ಷಗಳ ಹಿಂದೆ ಕೆಲಸ ಮುಗಿಸಿಕೊಂಡು ಮನೆಗೆ ಬುರುತ್ತಿದೇನೆ ಎಂದು ಮೊದಲ ಬಾರಿಗೆ ನ್ಯಾಯಾಲಯ ಮುಂದೆ ಹೇಳುತ್ತಿದ್ದೇನೆ ಎನ್ನುವುದು ಸರಿ. ನನಗೆ ಕನ್ನಡ ಓದಲು ಬರೆಯಲು ಬರುವುದಿಲ್ಲ ಎನ್ನುವುದು ಸರಿ. ಪೋಲಿಸರು ನನ್ನ ಹೇಳಿಕೆಯಲ್ಲಿ ಏನು ಬರದುಕೊಂಡಿದ್ದಾರೆ ಎನ್ನುವುದು ನನಗೆ ಗೊತ್ತಿಲ್ಲಾ ಎನ್ನುವುದು ಸರಿ.

6. ನಾನು ಮತ್ತು ಆರೋಪಿತರ ಸಂಬಂಧಿಕರು ಎನ್ನುವುದು ಸರಿ. ನಮಗೂ ಮತ್ತು ಆರೋಪಿರಿತಗೂ ಆಸ್ತಿ ವಿಚಾರವಾಗಿ ಸಿವಿಲ್ ವ್ಯಾಜ್ಯ ಇದೆ ಎನ್ನುವುದಕ್ಕೆ ನಮಗೆ ಯಾವುದೂ ಆಸ್ತಿಯು ಇಲ್ಲ ವ್ಯಾಜ್ಯವು ಇಲ್ಲ. ಈ ವಿಚಾರದಲ್ಲಿ ನಾನು ಸುಳ್ಳು

ಹೇಳುತ್ತಿದ್ದೇನೆ ಎನ್ನುವುದು ಸರಿಯಲ್ಲ.

7. ಘಟನೆಯನ್ನು ನಾನು ನೋಡಿ ಜಗಳ ಬಿಡಿಸಿದ್ದೇನೆ ಎಂದು ಸುಳ್ಳು ಹೇಳುತ್ತಿದ್ದೇನೆ ಎನ್ನುವುದು ಸರಿಯಲ್ಲ. ಚಾಸಾ-1 ಮಂಗೇಶ ಅವರ ಅಕಪಕ್ಕದಲ್ಲಿ ಬೇರೆ ಬೇರೆ ವಾಸದ ಮನೆಗಳು ಇವೆ. ಜಗಳ ಆಯಿತು ನಾನು ನೋಡಿದೆನು ಎಂದು ಹೇಳುವ ಸಮಯದಲ್ಲಿ ಅಕ್ಕಪಕ್ಕದವರು ಯಾರು ಇರಲಿಲ್ಲ.

8. ನಾನು ಮಂಗೇಶ ಕಾಂಬಳೆ ಅವರ ಮನೆ ಮುಂದೆ ಹಾದು ಹೋಗುತ್ತಿರಲಿಲ್ಲ, ಅಲ್ಲಿ ಯಾವುದೆ ಘಟನೆ ಆಗಿರುವುದಿಲ್ಲ, ಅಲ್ಲಿ ಯಾವುದೇ ಜಗಳ ಬಿಡಿಸಿರುವುದಿಲ್ಲ ಆದರೂ ನಾನು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎನ್ನುವುದು ಸರಿಯಲ್ಲ. ಆರೋಪಿತರಸಿಗೂ ನಮಗೂ ಸಿವಿಲ್ ವ್ಯಾಜ್ಯ ಇದ್ದು, ಆ ದ್ವೇಷದಿಂದ ನಾನು ಆರೋಪಿತರ ವಿರುದ್ಧ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎನ್ನುವುದು ಸರಿಯಲ್ಲ.

**ಮರು ವಿಚಾರಣೆಃ ಇಲ್ಲ.**

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯನ್ನು ಗಣಕ ಯಂತ್ರದ ಮುಖಾಂತರ ಪಡೆದುಕೊಳ್ಳಲಾಯಿತು).

ಓ.ಹೇ.ಕೇ.ಸರಿ ಅದೆ.

(ಸವಿತಾ ಕುಮಾರಿ ಎನ್)
3ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ಬೆಳಗಾವಿ.